**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10006/2023**

ಪಿಡಬ್ಲ್ಯೂ- 6

ಸಿಡಬ್ಲ್ಯೂ- 6

ಸಾಕ್ಷಿ ಹೆಸರು - ಪರಮೇಶಪ್ಪ

ತಂದೆ ಹೆಸರು - ಬಂಗಾರಪ್ಪ

ವಯಸ್ಸು - 52 ವರ್ಷ

ಉದ್ಯೋಗ - ಕೂಲಿ

ವಾಸಃ - ಯಲಸಿ , ಸೊರಬ ತಾಲ್ಲೂಕು

**ಪ್ರಮಾಣ ವಚನ ಭೋದಿಸಿದ ದಿನಾಂಕಃ** 18-07-2025.

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ಚಾಸಾ1 ನನ್ನ ಅಣ್ಣನ ಮಗ , ಚಾಸಾ2 ನನ್ನ ಅಣ್ಣ , ಚಾಸಾ3 ನನ್ನ ಅತ್ತಿಗೆ , ಚಾಸಾ4 ನನ್ನ ಅಣ್ಣನ ಮಗ , ಚಾಸಾ5 ಗೊತ್ತು. ಆರೋಪಿತರು ಗೊತ್ತು. ಅವರು ನಮ್ಮ ಗ್ರಾಮದವರು. ಆರೋಪಿತರು ಮತ್ತು ಚಾಸಾ1 ರವರ ಮನೆ ಅಕ್ಕಪಕ್ಕದಲ್ಲಿ ಇರುತ್ತದೆ. ಅವರುಗಳ ಮನೆಯಾದ ನಂತರ ಚಾಸಾ5 ರವರ ಮನೆ ಇರುತ್ತದೆ.

ಆರೋಪಿತರು ಮತ್ತು ಚಾಸಾ1 ಮತ್ತು 2 ರವರ ನಡುವೆ ಜಾಗದ ವಿಚಾರದಲ್ಲಿ ತಕರಾರು ಇರುತ್ತದೆ. ದಿನಾಂಕಃ 06-03-2022 ರಂದು ಸಂಜೆ 5-00 ಗಂಟೆಗೆ ನಾನು ನಮ್ಮ ಮನೆಯ ಹತ್ತಿರ ಇದ್ದೆ, ಆಗ ನನ್ನ ಅಣ್ಣ ಚಾಸ2 ರವರ ಮನೆಯ ಹತ್ತಿರ ಜನ ಸೇರಿದ್ದರು. ಅದನ್ನು ನೋಡಿ ನಾನು ನನ್ನ ಬೈಕ್ ನಲ್ಲಿ ನನ್ನ ಅಣ್ಣನ ಮನೆಯ ಬಳಿ ಹೋದೆ.

ಆಗ ನನ್ನ ಅತ್ತಿಗೆ ಅವರ ಮನೆಯ ಹಿಂಭಾಗದಲ್ಲಿ ಸಗಣಿ ಸಾರಿಸುತ್ತಿದ್ದರು. ಆಗ 1 ನೇ ಆರೋಪಿ ನನ್ನ ಅತ್ತಿಗೆ ಚಾಸಾ3 ರವರಿಗೆ ಕೆಟ್ಟ ಬಾಷೆಯಿಂದ ಬೈದಿರುತ್ತಾನೆ. ನಂತರ ನನ್ನ ಅಣ್ಣ ಚಾಸಾ2 ರವರು ಸ್ಥಳಕ್ಕೆ ಬಂದಿರುತ್ತಾರೆ. ನನ್ನ ಅಣ್ಣನ ಮಗ ಚಾಸಾ1 ರವರು ಸಹ ಅಲ್ಲಿಗೆ ಬಂದಿರುತ್ತಾರೆ. 1 ನೇ ಆರೋಪಿ ಮಚ್ಚಿನಿಂದ ಚಾಸಾ1 ರವರ ತಲೆಯ ಎಡಭಾಗಕ್ಕೆ ಹೊಡೆದಿರುತ್ತಾರೆ. ಆಗ ಚಾಸಾ1 ರವರಿಗೆ ತಲೆಯಿಂದ ರಕ್ತ ಬಂದಿರುತ್ತದೆ. ನನ್ನ ಅಣ್ಣನಿಗೂ ಸಹ ಪೆಟ್ಟಾಗಿತ್ತು , ಅವರಿಗೆ ಹೇಗೆ ಪೆಟ್ಟಾಯಿತು ಎಂದು ಗೊತ್ತಿಲ್ಲ. ಗಲಾಟೆಯನ್ನು ಊರಿನ ಜನ ಬಿಡಿಸಿರುತ್ತಾರೆ. 1 ನೇ ಆರೋಪಿ ಮಚ್ಚನ್ನು ಅಲ್ಲೇ ಬಿಸಾಡಿ ಹೋದ. ಸ್ಥಳದಿಂದ ಹೋಗಬೇಕಾದರೆ 1 ನೇ ಅರೋಪಿ ಈ ದಿವಸ ತಪ್ಪಿಸಿಕೊಂಡಿದ್ದೀರಾ ಮತ್ತೆ ಸಿಕ್ಕಿದರೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾನೆ. ನಂತರ ನಾನು ಚಾಸಾ4, ಚಾಸಾ5 ರವರು ಚಾಸಾ1 ಮತ್ತು 2 ರವರನ್ನು ಸೊರಬ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. 1 ನೇ ಆರೋಪಿ ಚಾಸಾ1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಆತನಿಗೆ ಮಚ್ಚಿನಿಂದ ಹೊಡೆದಿರುತ್ತಾನೆ.

1 ನೇ ಆರೋಪಿ ಚಾಸಾ1 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ಮಚ್ಚನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ಈಗ ನೋಡುತ್ತಿದ್ದು ಮಚ್ಚನ್ನು ಈಗಾಗಲೇ ಮು ಮಾ 4 ಎಂದು ಗುರುತಿಸಲಾಗಿದೆ. ಆ ದಿವಸ ಗಲಾಟೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿತರು ಈ ದಿವಸ ನ್ಯಾಯಾಲಯದ ಮುಂದೆ ಇರುತ್ತಾರೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ವಿಚಾರವನ್ನು ನಾನು ಪೋಲೀಸರ ಮುಂದೆ ಹೇಳಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ**

ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಸುಮಾರು 10-15 ಜನ ಊರಿನವರು ಇದ್ದರು ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ನಮ್ಮ ಮನೆಯಿಂದ ಚಾಸಾ2 ರವರ ಮನೆಗೆ ಸುಮಾರು 5-6 ಮನೆ ಅಂತರ ಇರುತ್ತದೆ. ಆ ದಿವಸ ನನ್ನ ಅಣ್ಣನ ಮನೆಯ ಬಳಿ ಯಾವುದೇ ಘಟನೆ ನಡೆದಿರುವುದಿಲ್ಲ , ಮತ್ತು ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ.

ಮು ಮಾ 4 ಮಚ್ಚಿನಿಂದಲೇ ಚಾಸಾ1 ರವರಿಗೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳಲು ಯಾವುದಾದರೂ ವಿಶೇಷವಾದ ಗುರುತನ್ನು ಇಟ್ಟುಕೊಂಡಿದ್ದೀರಾ ಎಂದರೆ ಸಾಕ್ಷಿ ಮರದ ಹಿಡಿಕೆ ಇರುವುದರಿಂದ ಅದೇ ಮಚ್ಚು ಎಂದು ಹೇಳುತ್ತಿದ್ದೇನೆ ಎಂದು ಹೇಳುತ್ತಾರೆ. ನಾನು ಆ ದಿವಸ ಬೈಕ್ ನಲ್ಲಿ ನನ್ನ ಅಣ್ಣನ ಮನೆ ಹತ್ತಿರ ಹೋದಾಗ ಮು ಮಾ 4 ಮಚ್ಚನ್ನು ನೋಡಿರುವುದಿಲ್ಲ , ಅದನ್ನು ಪೋಲೀಸರು ಸ್ಥಳಕ್ಕೆ ಬಂದಾಗ ನೋಡಿರುತ್ತೇನೆ ಎಂದು ಹೇಳುತ್ತಾರೆ. ದಿಃ07-03-2022 ರಂದು ಪೋಲೀಸರು ನನಗೆ ಕರೆ ಮಾಡಿದ್ದರು ಆಗ ನಾನು ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ನಾನು ಯಾವುದೇ ಕೃತ್ಯವನ್ನು ನೋಡಿರುವುದಿಲ್ಲ , ಚಾಸಾ1 ಮತ್ತು 2 ನನ್ನ ಅಣ್ಣ ಮತ್ತು ಅಣ್ಣನ ಮಗನಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿವಸ ನ್ಯಾಯಾಲಯಕ್ಕೆ ಚಾಸಾ1 ರವರು ಬಂದಿರುತ್ತಾರೆ ಎಂದರೆ ಸರಿ. ನಾನು ಈ ದಿವಸ ಚಾಸಾ1 ರವರ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ. ಈ ದಿವಸ ಚಾಸಾ 5 ಕನ್ನಪ್ಪ

ನಿಮ್ಮ ಜೊತೆ ಬಂದಿರುತ್ತಾರೆ ಎಂದರೆ ಸಾಕ್ಷಿ ಅವರು ಬಸ್ ನಲ್ಲಿ ಬಂದಿರುತ್ತಾರೆ ಎಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).